The Resolution was by Leave, withdrawn.

(*iii*) *re*: Shifting the Race Course to outskrits of Bangalore City.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು (ಶಾಂತಿನಗರ).—ಮಾನ್ಯ ಅಧ್ಯಕ್ಷರೇ, ನಾನು ತಂದಿರುವ ನಿರ್ಣಯ ಈರೀತಿ ಇದೆ " ಈಗಿರುವ ಕುದುರೆ ಜೂಜಿನ ಮೈದಾನವನ್ನು ಬೆಂಗಳೂರು ನಗರದ ಹೊರ ವಲಯಕ್ಕೆ ಸ್ಥಳಾಂತರಿಸಿ ಸದರಿ ಪ್ರದೇಶವನ್ನು ಅಂತರರಾಷ್ಟ್ರೀಯ ಮಹತ್ವದ ವ್ಯಾಪಾರ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಲು ಬಳಸಿಕೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. " ಎಂಬ ಈ ನಿರ್ಣಯವನ್ನು ತಂದ ಘನ ಉದ್ದೇಶವಾದರೂ ಇಷ್ಟೆ. ಹಿಂದೆ ನಾನು ಒಂದು ಪ್ರಶ್ನೆಯನ್ನು ಹಾಕಿದ್ದ ಕಾಲದಲ್ಲಿ ಮಾನ್ಯ ಅರ್ಥ ಮಂತ್ರಿಗಳಾದ ಶ್ರೀಮಾನ್ ಘೋರ್ಪಡೆಯವರು ಇದನ್ನು ಹೊರಗಡೆ ತೆಗೆಯುವುದಕ್ಕೆ ಆಗುವುದಿಲ್ಲವೆಂದು ಖಚಿತ ಉತ್ತರ ಕೊಟ್ಟಿದ್ದರು. ಅಧ್ಯಕ್ಷರೇ, ಇದರ ಅನುಕೂಲ ಮತ್ತು ಅನಾನುಕೂಲಗಳನ್ನು ನಾನು ವಿವರಿಸ ಬೇಕೆಂದು ಇದ್ದೇನೆ. ರೇಸ್‌ಕೋರ್ಸ್ ಇರಕೂಡದು ಎಂದು ಹೇಳುವ ಅಭಿಪ್ರಾಯ ನನಗೆ ಇಲ್ಲ. ಎಲ್ಲಿಯಾದರೂ ಬೆಂಗಳೂರಿನ ಹೊರಗಡೆಗೆ ಹಾಕಬೇಕು ಎನ್ನುವುದು ನನ್ನ ವಾದದ ತಿರುಳು.

Mr. DEPUTY SPEAKER.—The resolution moved :

> " ಈಗಿರುವ ಕುದುರೆ ಜೂಜಿನ ಮೈದಾನವನ್ನು ಬೆಂಗಳೂರು ನಗರದ ಹೊರವಲಯಕ್ಕೆ ಸ್ಥಳಾಂತರಿಸಿ ಸದರಿ ಪ್ರದೇಶವನ್ನು ಅಂತರರಾಷ್ಟ್ರೀಯ ಮಹತ್ವದ ವ್ಯಾಪಾರ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಲು ಬಳಸಿಕೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. "

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು.—ರೇಸ್‌ಕೋರ್ಸ್ ಈಗ ನಮ್ಮ ಪಟ್ಟಣದ ಮಧ್ಯದಲ್ಲಿದೆ. ಇದು ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿದೆ. ಬೆಂಗಳೂರು ಪಟ್ಟಣ ಬೃಹದಾಕಾರವಾಗಿ ಬೆಳೆಯುತ್ತಿದೆ. ಈಗತಾನೆ ಕೆಲವು ಸದಸ್ಯರು ಹೇಳಿದರು ಇದರ ವಿಸ್ತೀರ್ಣ ಸುಮಾರು 20–30 ಚದುರ ಮೈಲಿ ಇದೆಯೆಂದು. ನಾನು ಹೇಳುತ್ತೇನೆ, ಇದರ ವಿಸ್ತೀರ್ಣ, ಸುಮಾರು 60 ಚದುರ ಮೈಲಿಗಳು ದೂರ ಇದೆ. ಹೀಗಿರುವಾಗ, ಇದು ನಗರದ ಮಧ್ಯದಲ್ಲಿರುವುದರಿಂದ ನಮಗೆ ಬೇಕಾದಷ್ಟು ತೊಂದರೆಯಾಗುತ್ತೆ. ತಮಗೆ ಗೊತ್ತಿರುವ ಹಾಗೆ, ರೇಸ್‌ಕೋರ್ಸಿನ ಸುತ್ತಮುತ್ತ ಅನೇಕ ವಿದ್ಯಾಸಂಸ್ಥೆಗಳು ಇವೆ. ಉದಾಹರಣೆಗೆ ಹೇಳುವುದಾದರೆ, ಒಂದುಕಡೆ ರಾಂನಾರಾಯಣ್ ಜೆಲ್ಲಾರಾಂ ಕಾಲೇಜು ಇದೆ, ಇನ್ನೊಂದು ಕಡೆ ರೇಣುಕಾಚಾರ್ಯ ಕಾಲೇಜು ಇದೆ, ಮತ್ತೊಂದು ಕಡೆ ಸೆಂಟ್ರಲ್ ಕಾಲೇಜು ಮತ್ತು ಮಹಾರಾಣಿಯವರ ಕಾಲೇಜುಗಳು ಇವೆ. ಇದರ ಜೊತೆಗೆ ಕೆಲವು ಹಾಸ್ಟಲುಗಳು ಸಹ ಇವೆ. ಅಂದರೆ ಜಯದೇವ ಹಾಸ್ಟಲ್, ವೈಶ್ಯರ ಹಾಸ್ಟಲ್, ಇನ್ನು ಮುಂತಾದ ಹಾಸ್ಟಲುಗಳು ಅದರ ಪಕ್ಕದಲ್ಲಿವೆ. ಇದರಿಂದ ಏನಾಗುತ್ತದೆ ಎಂದರೆ, ನಮ್ಮ ಯುವಕರಿಗೆ ವಿದ್ಯೆಯ ಮೇಲೆ ಅಷ್ಟು ಗಮನ ಹೋಗದೆ ರೇಸನ್ನು ನೋಡಬೇಕಾದಂಥ ಆಕಾಂಕ್ಷೆ ಸಣ್ಣ ವಯಸ್ಸಿನಲ್ಲಿಯೇ ಬೆಳೆಯಲಿಕ್ಕೆ ಅವಕಾಶವಾಗುತ್ತದೆಂದು ನನ್ನ ಖಚಿತ ಅಭಿಪ್ರಾಯ. ಇದಲ್ಲದೆ ಕೆಲವು ಹೋಟೆಲ್‌ಗಳು ಕೂಡ ಇವೆ. ಆಶೋಕ ಹೋಟಲ್, ಇಂಟರ್ ನ್ಯಾಷನಲ್ ಹೋಟೆಲ್ ಮತ್ತು ಇನ್ನೂಸಣ್ಣಸಣ್ಣ ಕೆಲವು ಹೋಟೆಲ್‌ಗಳು ಇವೆ. ರೇಸ್ ನಿಂದ ಕೆಲವರು " ದಿಢೀರ್‌ನೇ " ಸಾಹುಕಾರರಾಗಬೇಕು ಎನ್ನುವ ಆಕಾಂಕ್ಷೆಯನ್ನು ಇಟ್ಟುಕೊಂಡಿರುತ್ತಾರೆ. ಈಗ ವಾರಕ್ಕೆ ಮೂರು ನಾಲ್ಕು ಸಲ ರೇಸ್ ನಡೆಯುತ್ತಿರುವುದರಿಂದ ಜನತೆಗೆ ಎಷ್ಟು ತೊಂದರೆಯಾಗುತ್ತದೆ, ಯುವಕರಿಗೆ ಎಷ್ಟು ತೊಂದರೆಯಾಗುತ್ತಿದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಅನೇಕರು ದಿಢೀರ್‌ನೇ ಸಾಹುಕಾರರಾಗುವ ದೃಷ್ಟಿಯಿಂದ ಇದು ನಗರದ ಮಧ್ಯದಲ್ಲಿಯೇ ಇರಲಿ ಎಂದು ಹೇಳಬಹುದು. ಇದನ್ನು ನಗರದ ಹೊರಗಡೆ ಹಾಕಿದರೂ ಸಾಹುಕಾರರಾಗುವುದಕ್ಕೆ ಅವಕಾಶ ಇದ್ದೇ ಇದೆ. ಮಾನ್ಯ ಮಂತ್ರಿಗಳೂ ಸಹ ಹೇಳಬಹುದು, ರೇಸ್ ಕೋರ್ಸನ್ನು ತೆಗೆದರೆ ನಮಗೆ ನಾಲ್ಕು ಕೋಟಿ ರೂಪಾಯಿಗಳಷ್ಟು ಹಣ ನಷ್ಟವಾಗುತ್ತದೆಂದು. ನಾನು ಹೇಳುತ್ತೇನೆ, ರೇಸಕೋರ್ಸ್ ನಗರದ ಮಧ್ಯದಲ್ಲಿಂದ ತೆಗೆದು ಹಾಕಿದ ಪಕ್ಷದಲ್ಲಿ ನಾಲ್ಕು ಕೋಟಿ ರೂಪಾಯಿಗಳಲ ನಲವತ್ತು ಕೋಟಿ ರೂಪಾಯಿಗಳು ನಿಮಗೆ ಸಿಕ್ಕುತ್ತದೆ ಎಂದು. ಕಾರಣ, ಅಲ್ಲಿ ಒಂದೊಂದು ಅಂಗುಲ, ಅಥವಾ ಇಂಚು ಭೂಮಿಗೂ ಲೆಕ್ಕ ಇದೆ. ಜಯನಗರದಲ್ಲಿ 60–40 ಒಂದು ಸೈಟು ಇದ್ದರೆ, ಅದಕ್ಕೆ 40–50 ಸಾವಿರ ರೂಪಾಯಿಗಳು ಸಿಕ್ಕುತ್ತದೆ. ಇಲ್ಲಿ

ಮಾಡರ್ನ್ ಬಿಸಿನೆಸ್ ಕಾಂಪ್ಲೆಕ್ಸ್ (" Modern Business Complex) ಅನ್ನು ಸ್ಥಾಪನೆ ಮಾಡಿದರೆ, ಅದರಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಬಂದೇ ಬರುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಒತ್ತಿ ಹೇಳುತ್ತೇನೆ. ಹಿಂದೆ ಇದರ ಬಗ್ಗೆ ಒಂದು ಕಮಿಟಿಯನ್ನು ಏರ್ಪಾಡು ಮಾಡಿ, ಅವರು ಸಹ ಇದನ್ನು ಬೆಂಗಳೂರಿನ ಹೊರಗೆ ಹಾಕಬೇಕು, ಜಕ್ಕೂರು ಕಡೆಗೋ ಅಥವಾ ಬೇರೆ ಕಡೆಗೆ ಇದನ್ನು ಬದಲಾಯಿಸಬೇಕೆಂದು ಅಭಿಪ್ರಾಯ ಪಟ್ಟರು. ಮಾನ್ಯಮಂತ್ರಿಗಳು ಹಣದುಬ್ಬರ ಇರುವಾಗ ಇದನ್ನು ಬದಲಾಯಿಸುವುದಕ್ಕಾಗುವುದಿಲ್ಲ ಎನ್ನುವ ಉಚಿತವಾದ ಮಾತನ್ನು ಹೇಳಿದ್ದಾರೆ.

Mr. DEPUTY SPEAKER.—I think the hon. Member will require considerable time. The hon. Minister for Fisheries has requested me to permit him to make a statement. Anyway, there is no difficulty because the Resolution of the hon. Member has come up. The hon. Member can resume his speech next time.

Now, I would call upon the hon. Minister for Fisheries to make the statement.

Statement of the Minister of State for Fisheries re : *Distress relief to Fishermen.*

Sri K. T. RATHOD (Minister of State for Fisheries).—I crave the indulgence of this August House to take a few minutes of its precious time to bring to the notice of the hon. Members the following matter :—

I. Fishermens Distress Relief Fund

Government in the Fisheries Department have constituted a fund called the Fishermen's Distress Relief Fund for the benefit of the fishermen in the State with a view to provide them immediate relief in times of emergencies such as, cyclonic storms, tidal waves, incessant rains and floods. To start with, a sum of Rs. 50,000 is credited to this fund. I am also happy to inform this House that out of this fund, three unfortunate fishermen families where the carning members have lost their lives due to flood havocs, have been given an *ad hoc* grant to meet the immediate requirements of the family, pending ascertaining the details of their loss and amount needed for their rehabilitation like repairing of their boats and to purchase other fisheries requisites. A small Committee consisting of the following is also constituted to administer this fund :

1. The Minister of State for Fisheries and Horticulture. *Chairman*